ಬೆಳೆಸುವ ಮೂಲಕ ಕುಟುಂಬದ ಆನಂದವನ್ನು ಹೆಚ್ಚಿಸುವ ಒಬ್ಬ ವ್ಯಕ್ತಿಯನ್ನು ನಮ್ಮ ಮನೆಗೆ ಕರೆತರಬೇಕಾದರೆ ಅದರ ಬಗ್ಗೆ ಯೋಚಿಸಬೇಡವೇ?

Let the baby by choice not by chance ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಾವು ಅಪೇಕ್ಷೆ ಪಟ್ಟು ಮಗುವನ್ನು ಪಡೆದಾಗ ನಾವು ಬಯಸಿದ ರೀತಿಯ ಮಗುವನ್ನು ಪಡೆಯುವುದು ಸಾಧ್ಯ. ಅದೊಂದು Accident ಆದರೆ Deformity, Disabilityಗಳಿಗೂ ಅವಕಾಶವುಂಟು. ಈ ಹಿನ್ನೆಲೆಯಲ್ಲಿ ಶ್ರೇಷ್ಠ ಸಮಾಜಕ್ಕಾಗಿ ಶ್ರೇಷ್ಠ ಸಂತತಿಯನ್ನು ಪಡೆಯಬೇಕೆನ್ನುವ ಉದ್ದೇಶದಿಂದ ದೇಶದ ವಿವಿಧ ಭಾಗಗಳಲ್ಲಿ ಗರ್ಭಸಂಸ್ಕಾರವನ್ನು ಒಂದು ಆಂದೋಲನದ ರೀತಿಯಲ್ಲಿ ನಡಸಲಾಗುತ್ತಿದೆ. ದಂಪತಿಗಳಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾತ್ರವೇ ಈ ಆಂದೋಲನದ ಉದ್ದಿಶ್ಯ. ಗರ್ಭ ಧರಿಸುವ ಪೂರ್ವದಲ್ಲಿ ದಂಪತಿಗಳು ಸಂಯಮಿತ, ನಿಯಮಿತವಾಗಿ ಕ್ರಮಬದ್ಧ ಜೀವನ ನಡೆಸಿದಲ್ಲಿ ಅಪೇಕ್ಷಿತ ಸಂತತಿ ಪಡೆಯುವುದು ಸಾಧ್ಯ ಎಂಬುದು ಅನೇಕ ಪ್ರಯೋಗಗಳಿಂದಲೂ ಸಿದ್ಧಗೊಂಡಿದೆ.

ಈ ಹಿನ್ನೆಲೆಯಲ್ಲಿ 16 ವರ್ಷಗಳ ಹಿಂದೆ ಗುಜಾರಾತಿನ ಜಾಮ್‌ನಗರದ ಆಯುರ್ವೇದ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಡಾ।। ರೀಟಾ ಸುಬ್ರಹ್ಮಣ್ಯರವರು, ಅದೇ ಕಾಲೇಜಿನ ಪಂಚಕರ್ಮ ವಿಭಾಗದ ಮುಖ್ಯಸ್ಥರೂ ಪ್ರಸ್ತುತ ಆಯುರ್ವೇದ ಪರಿಷತ್ತಿನ ಅಖಿಲ ಭಾರತೀಯ ಉಪಾಧ್ಯಕ್ಷರೂ ಆಗಿರುವ ಡಾ।। ಹಿತೇಶ್ ಜಾನಿ ಇವರುಗಳು ಚರ್ಚಿಸಿ ಆರಂಭಿಸಿದ ಆಂದೋಲನವೇ ಗರ್ಭ ವಿಜ್ಞಾನ ಅನುಸಂಧಾನ ಕೇಂದ್ರ. ಇಂದು ಇದು ಗುಜರಾತಿನಾದ್ಯಂತ ಗರ್ಭ ವಿಜ್ಞಾನ ಅನುಸಂಧಾನ ಕೇಂದ್ರ ಹಾಗೂ ವಿದ್ಯಾಭಾರತಿ ಜಂಟಿಯಾಗಿ ಸಮರ್ಥ ಭಾರತ ಕೇಂದ್ರ ಎನ್ನುವ ಹೆಸರಿನಲ್ಲಿ 13 ಕೇಂದ್ರಗಳನ್ನು ನಡೆಸುತ್ತಿದೆ. ಪ್ರತಿ ಕೇಂದ್ರದಲ್ಲಿ ನುರಿತ ತಜ್ಞ ಆಯುರ್ವೇದ ಹಾಗೂ ಅಲೋಪತಿ ವೈದ್ಯರನ್ನೊಳಗೊಂಡ ಒಂದು ತಂಡ ಕಾರ್ಯ ನಿರ್ವಹಿಸುತ್ತದೆ. ಡಾ। ಕರಿಷ್ಮಾ ನವರಾನಿ ಈ ಸಂಸ್ಥೆಯ ನಿರ್ದೇಶಕರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಪ್ರಾರಂಭದಲ್ಲಿ ವಿದ್ಯಾಭಾರತಿ, ರಾಷ್ಟ್ರ ಸೇವಿಕಾ ಸಮಿತಿಯ ಸಹಕಾರದೊಂದಿಗೆ ನವ ವಿವಾಹಿತ ದಂಪತಿಗಳನ್ನು ಒಂದೆಡೆ ಸೇರಿಸಿ ಗರ್ಭಸಂಸ್ಕಾರದ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಇದರಲ್ಲಿ ಆಸಕ್ತಿ ತೋರುವ ದಂಪತಿಗಳಿಗೆ ಶಿಕ್ಷಣ ಆರಂಭವಾಗುತ್ತದೆ. ಈ ಪ್ರಶಿಕ್ಷಣದಲ್ಲಿ ಗರ್ಭ ಧರಿಸುವ ಪೂರ್ವದಲ್ಲಿ ಅನುಸರಿಸಬೇಕಾದ ಕ್ರಮಗಳು, ಗರ್ಭಧರಿಸಿದ ನಂತರ ಅಳವಡಿಸಿಕೊಳ್ಳಬೇಕಾದ ಜೀವನ ಪದ್ಧತಿ, ಆಹಾರ ಕ್ರಮ, ಯೋಗ, ವ್ಯಾಯಾಮ, ಧ್ಯಾನ, ಪ್ರಾಣಾಯಾಮ ಇವುಗಳ ಬಗ್ಗೆ ಕಾಲಕಾಲಕ್ಕೆ ತಿಳುವಳಿಕೆ ನೀಡಲಾಗುವುದು. ಪ್ರಸವವಾಗುವರೆಗೆ ಪ್ರತಿ ತಿಂಗಳ ಒಂದು ಭಾನುವಾರ ಅಗತ್ಯ ಮಾಹಿತಿ, ಮಾರ್ಗದರ್ಶನ, ಚಿಕಿತ್ಸೆ ನೀಡಲಾಗುವುದು. ಈ ಪ್ರಕಾರ ಕಳೆದ 16 ವರ್ಷದಲ್ಲಿ 450 ದಂಪತಿಗಳು ಫಲಾನುಭವಿಗಳಾಗಿದ್ದಾರೆ. ಇದರ ಪರಿಣಾಮ ಹುಟ್ಟಿರುವ ಮಕ್ಕಳಲ್ಲಿನ ನಡವಳಿಕೆಗಳು ಇತರ ಮಕ್ಕಳ ಹೋಲಿಕೆಯಲ್ಲಿ ಅಗಾಧ ಪ್ರಮಾಣದ ಬದಲಾವಣೆಗಳನ್ನು ಗುರುತಿಸಬಹುದಾಗಿದೆ. ಇದರಿಂದ ಪ್ರೇರಿತವಾಗಿ ಕರ್ನಾಟಕದಲ್ಲೂ ಕುಟುಂಬ ಪ್ರಬೋಧನದ ಕಾರ್ಯಕರ್ತರು ಇದೇ ಪ್ರಯೋಗವನ್ನು ಸಮುನ್ನತಿ ಹೆಸರಿನಲ್ಲಿ ನಡೆಸುತಿದ್ದಾರೆ. ಮೂರು ದಿವಸದ ಸಮುನ್ನತಿ ಶಿಬಿರದಲ್ಲಿ ದಂಪತಿಗಳಿಂದ ಉತ್ತಮ ಸಂತತಿಗಾಗಿ ಸಂಕಲ್ಪ, ಹೋಮ, ದೇಹದ ಶುದ್ಧೀಕರಣಕ್ಕಾಗಿ ಪಂಚಕರ್ಮ, ಸಂಯಮದ ಜೀವನಕ್ಕಾಗಿ 48 ದಿನದಿಂದ 3 ತಿಂಗಳುಗಳ ಬ್ರಹ್ಮಚರ್ಯ, ಶಾರೀರಿಕ ಕ್ಷಮತೆಗಾಗಿ ಯೋಗ, ಧ್ಯಾನ, ಪ್ರಾಣಾಯಾಮಗಳು, ಮನಸ್ಸನ್ನು ಶಾಂತವಾಗಿಡಲು ಸಂಗೀತದ ಕೆಲವು ವಿಶೇಷ ರಾಗಗಳ ಪರಿಚಯ ಹಾಗೂ ಇವುಗಳಿಂದ ಆಗುವ ಪ್ರಯೋಜನಗಳನ್ನು ತಿಳಿಸಿಕೊಡಲಾಗುತ್ತದೆ. ಕಳೆದ 3-4 ವರ್ಷಗಳಿಂದ ಸಮುನ್ನತಿ ಕಾರ್ಯ ನಿರ್ವಹಿಸುತ್ತಿದ್ದು ಈಗಾಗಲೇ ಸಮುನ್ನತಿಯ ಅಡಿಯಲ್ಲಿ 45 ದಂಪತಿಗಳು ಸಂತತಿಯನ್ನು ಪಡೆದಿದ್ದಾರೆ. ಸಮುನ್ನತಿ ಕಾರ್ಯಕರ್ತರಾಗಿರುವ ಇಬ್ಬರು ವೈದ್ಯರು ತಮ್ಮನ್ನೇ ಮೊದಲು ಈ ಪ್ರಯೋಗಕ್ಕೊಳಪಡಿಸಿಕೊಂಡು ಮಗುವನ್ನು ಪಡೆದಿರುವುದು ವಿಶೇಷ.

ಈ ಪ್ರಯೋಗದಲ್ಲಿ ಆಸಕ್ತ ದಂಪತಿಗಳು ಕುಟುಂಬ ಪ್ರಬೋಧನದ ಕಾರ್ಯಕರ್ತರಾದ

ಡಾ। ಜಯಶ್ರೀ - 9449978452 ಮೈಸೂರು ಹಾಗೂ

ಡಾ। ಶ್ರೀಪತಿ - 8722349738 ಬೆಳಗಾವಿ ಇವರನ್ನು

ಸಂಪರ್ಕಿಸಬಹುದು

## ಅಮೆರಿಕದ ಅಭಿಮನ್ಯು

**ಅಮೆರಿಕೆಯ ವಾಷಿಂಗ್‌ಟನ್ ಡಿಸಿಯಲ್ಲಿನ ಮನಃಶಾಸ್ತ್ರಜ್ಞೆ ಡಾ।। ಎಲೆನ್ ವೆಬರ್ ಲಿಬೆ The Favourit child ಎನ್ನುವ ಸಂಶೋಧನಾ ಕೃತಿಯನ್ನು ರಚಿಸಿದ್ದು ಅದರಲ್ಲಿ ಗರ್ಭಸ್ಥ ಮಗುವಿನ ಮೇಲೆ ತಾಯಿಯ ಭಾವನೆಗಳು ನಡವಳಿಕೆಗಳು ಬಹಳ ಮಟ್ಟದ ಪರಿಣಾಮ ಬೀರುತ್ತದೆಂಬುದನ್ನು ನಿರೂಪಿಸಿದ್ದಾರೆ. ಅವರ ಸಂಶೋಧನೆಯಲ್ಲಿ ಟಾಮ್ ಮತ್ತು ಕಾರ್ಲಾ ದಂಪತಿಗಳ ಅನುಭವವನ್ನು ದಾಖಲಿಸಿದ್ದಾರೆ ಅದು,**

**''ಟಾಮ್ ಮತ್ತು ಕಾರ್ಲಾ ಎಂಬ ದಂಪತಿಗಳಲ್ಲಿ ಕಾರ್ಲಾ ಗರ್ಭಿಣಿಯಾಗಿದ್ದಾಗ ಪತಿ ಗರ್ಭಸ್ಥ ಶಿಶುವನ್ನು ಪ್ರತಿದಿನ ರಾತ್ರಿ ತಾನು ಮಲಗುವ ಮುನ್ನ ಗರ್ಭಿಣಿಯ ಹೊಟ್ಟೆಯ ಮೇಲೆ ತನ್ನ ಎದೆಯನ್ನಿಟ್ಟು ತನ್ನ ಹೃದಯದ ಬಡಿತವನ್ನು ಆ ಗರ್ಭಸ್ಥ ಶಿಶುವಿಗೆ ಕೇಳಿಸುವುದು, ಮಾತನಾಡಿಸುವುದು, ಮುದ್ದಿಸುವುದು ಮಾಡುತ್ತಿರುತ್ತಾನೆ. ಅವನ ಪತ್ನಿ 7ನೇ ತಿಂಗಳ ಗರ್ಭಿಣಿಯಾಗಿದ್ದಾಗ, ಟಾಮ್ ಕೆಲಸದ ನಿಮಿತ್ತ ಕೆಲ ದಿನಗಳಿಗಾಗಿ ಕಾರ್ಲಾಳನ್ನು ಬಿಟ್ಟು ಬೇರೆ ಊರಿಗೆ ಹೋಗಬೇಕಾಗುತ್ತದೆ. ಆ ಸಮಯದಲ್ಲಿ ಆ ಗರ್ಭಸ್ಥ ಶಿಶು ತಾಯಿಗೆ ಬಹಳವಾಗಿ ಒದೆಯುವುದು, ತಾಯಿಗೆ ಬಹಳವಾಗಿ ಹಿಂಸೆ ಮಾಡುತ್ತಾ ತಾಳಲಾರದ ಮುಜುಗರ ಅನುಭವಿಸುವಂತೆ ಮಾಡುತ್ತದೆ. ಆ 2 ವಾರಗಳು ಕಾರ್ಲಾ ನಿದ್ದೆ ಕೂಡ ಮಾಡಲಾಗುವುದಿಲ್ಲ, ಟಾಮ್ ವಾಪಸ್ಸಾದ ನಂತರ ಎಂದಿನಂತೆ ಆ ಗರ್ಭಸ್ಥ ಶಿಶುವನ್ನು ಮಾತನಾಡಿಸಿ ಮುದ್ದಿಸಿದ ನಂತರ ಅದರ ಹಠ ನಿಲ್ಲುತ್ತದೆ.**

**ಈ ಸಂಶೋಧನೆ ತಿಳಿಸುವುದೇನೆಂದರೆ ಪುರಾಣದಲ್ಲಿ ಬರುವ ಅಭಿಮನ್ಯುವಿನ ಕಥೆಯಾಗಲಿ ಗರ್ಭಸ್ಥ ಶಿಶುವಿಗೆ ನಾರದರು ಅಷ್ಟಾಕ್ಷರಿ ಮಂತ್ರದ ಉಪದೇಶ ನೀಡಿದ್ದರಿಂದ ಅವನು ವಿಷ್ಣು ಭಕ್ತನಾಗಿದ್ದು ಕಪೋಲಕಲ್ಪಿತ ಕಥೆಯಲ್ಲ; ಅದೇ ವಾಸ್ತವ ಎಂಬ ಸಂಗತಿಗಳು ತಿಳಿಯುತ್ತದೆ.**